## ಮುತ್ತಿನ ಗೆಜ್ಜೆಮಲಾಕ್

ನೆಕ್ಲೆಸ್ ಅನ್ನೇ ಹೋಲುವ ಗೆಜ್ಜೆಮಲಾಕ್ ಅಜ್ಜಿಯರ ಕಾಲದ ಒಡವೆ. ಆದರೆ ಇದೀಗ ಗೆಜ್ಜೆ ಮಲಾಕ್ ಮತ್ತೆ ಫ್ಯಾಷನ್ ಆಗಿದೆ. ಇದು ಒಂದೇ ಆಭರಣ ಹಾಕಿಕೊಂಡರೆ ಸಾಕು, ಕೊರಳು ತುಂಬ ಕಾಣುವ, ಅಂದಕ್ಕೆ ಎಂದೂ ಕೊರತೆಯಾಗದ ಗೆಜ್ಜೆ ಮಲಾಕ್ ಹಲವು ವೈವಿಧ್ಯಗಳಲ್ಲಿಯೂ ಲಭ್ಯ.

ಮುತ್ತಿನಿಂದ ಪೋಣಿಸಿದ ಸಣ್ಣ ಹಾರದಂತಿರುವ ಗೆಜ್ಜೆಮಲಾಕ್ ನೋಡಲೂ ಚಂದ, ತೊಟ್ಟುಕೊಂಡರೆ ಸುಂದರವಾಗಿರುತ್ತದೆ. ಇದರೊಂದಿಗೆ ಬೇರೆ ಸರ, ಹಾರಗಳೂ ಬೇಕಿಲ್ಲ. ಬರಿಯ ಚಿನ್ನದಲ್ಲಿ ಮಾಡಿದ ಗೆಜ್ಜೆಮಲಾಕ್ ಕೂಡ ಸಖತ್ ಲುಕ್ ಕೊಡುತ್ತದೆ.

ಚಿನ್ನದ ದಾರದಲ್ಲಿ ಪೋಣಿಸಿದ ಪುಟಾಣಿ ಮುತ್ತಗಳು ಒಂದು ಲೇಯರ್‌ನಲ್ಲಿದ್ದರೆ ಅದರ ಕೆಳ ಹಂತದಲ್ಲಿ ಚಿನ್ನದಲ್ಲೇ ಮಾಡಿದ ಬೇರೆ ವಿನ್ಯಾಸದ್ದು ಕೂಡ ಎದ್ದು ಕಾಣುತ್ತದೆ. ಕೊನೆಯ ಹಂತದಲ್ಲಿ ಮಾವಿನ ಎಲೆ ಅಥವಾ ಹಣ್ಣಿನ ಆಕಾರದಲ್ಲಿ ವಿನ್ಯಾಸ ಮಾಡಿದ ಸೀಕ್ವೆನ್ಸ್ ವರ್ಕ್ ಇರುವ ಜ್ಯುವೆಲ್ಲರಿ ಕೂಡ ಗೆಜ್ಜೆಮಲಾಕ್‌ಗೆ ಹೆಚ್ಚುವರಿ ಅಂದ ಕೊಡುತ್ತದೆ.

ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ ದಪ್ಪ ಬಾರ್ಡರ್‌ನ ರೇಷ್ಮೆ ಸೀರೆಗಳಿಗೆ ಹೇಳಿ ಮಾಡಿಸಿದ ಒಡವೆ ಇದು. ಫ್ಯಾಷನ್ ಜಗತ್ತಿನಲ್ಲಿ ಅಂದು, ಇಂದು ಎಂದೆಂದಿಗೂ ಕಂಗೊಳಿಸುವ ಗೆಜ್ಜೆ ಮಲಾಕ್ ಫ್ಯಾಷನ್‌ಪ್ರಿಯರ ತಿಜೋರಿಯಲ್ಲಿ ಇರಬೇಕಾದ ಆಭರಣವೇ.

★ ಸುಮನಾ ಜಿ. ಪ್ರಸಾದ್





ನೀಲಿ ಒಂದು ಕಲ್ಲಿನ ಹಾರ



ಆ್ಯಂಟಿಕ್ ಆರೆಂಜ್ ನೆಕ್ಲೆಸ್

### ಆ್ಯಂಟಿಕ್ ಆರೆಂಜ್ ನೆಕ್ಲೆಸ್

ಆಕ್ಸಿಡೈಸಡ್ ಫಿನಿಶ್ ಹೊಂದಿರುವ ಆ್ಯಂಟಿಕ್ ಬಾಲ್, ಇದರಲ್ಲಿ ಕೆತ್ತನೆ ಇದ್ದು ಅದರ ಅಂದವನ್ನು ಇದು ಇನ್ನೂ ಹೆಚ್ಚಿಸಿದೆ ಆರೆಂಜ್ ಬಣ್ಣದ ಮಣಿ ಇನ್ನೂ ಮೌಲ್ಯ ಹೆಚ್ಚಿಸುತ್ತದೆ. ಒಂದಕ್ಕೊಂದು ಹೊಂದಿಕೊಂಡು ತನ್ನ ಇರುವಿಕೆಯನ್ನು ತೋರಿಸುತ್ತದೆ. ಕಾಟನ್ ಸಾರಿ, ಕುರ್ತಾ, ಪ್ಯಾಂಟ್‌ಗಳಿಗೂ ಹೊಂದಿಕೊಂಡು ಕುತ್ತಿಗೆಯಲ್ಲಿ ಶೋಭಿಸುತ್ತದೆ.

### ನೀಲಿ ಒಂದು ಕಲ್ಲಿನ ಹಾರ

ಕಲ್ಲನ್ನು ಹರಳನ್ನು ಕೂರಿಸುವಾಗ ಹಲವಾರು ವಿಧದಲ್ಲಿ ಕೂರಿಸುತ್ತಾರೆ. ಅದು ಕಣ್ಣಿಗೆ ಗೋಚರಿಸಬೇಕು. ಇಂದು ವೈಟ್ ಗೋಲ್ಡ್, ಬೆಳ್ಳಿ ಇತರ ಆಭರಣಗಳಿಗೂ ಪ್ರಾಶಸ್ತ್ಯವಿದೆ. ನೀಲ ಬಣ್ಣ ಬೆಳ್ಳಿ ಬಣ್ಣಕ್ಕೆ ಅತ್ಯಂತ ಮೆರುಗು ನೀಡುತ್ತದೆ. ನೀಲ ವರ್ಣ ಅನ್ನೋದು ಮನಸ್ಸಿನ ಉದ್ವೇಗವನ್ನು ಕಡಿತಗೊಳಿಸುತ್ತದೆ ಸರಳವಾಗಿರುವ ಸುಂದರ ನೆಕ್ಲೆಸ್ ಇದು.

### ಮುತ್ತು ಮಣಿಗಳ ಮಿಶ್ರ ಹಾರ

ಮುತ್ತನ್ನು ಸಾಧಾರಣ ಇಷ್ಟಪಡದವರಿಲ್ಲ. ದೊಡ್ಡದಾದ ಬೇರೆ ಬಣ್ಣದ ಹರಳು ಅಥವಾ ಮಣಿಗಳನ್ನು ಅಳವಡಿಸಿ ಅದನ್ನು ಆಕ್ಸಿಡೈಸಡ್ ಫಿನಿಶ್ ಹೊಂದಿದ ಬೆಳ್ಳಿಯಲ್ಲಿ ಹಾರವನ್ನು ಸಿದ್ಧ ಮಾಡಿ ಅದಕ್ಕೊಂದು ಪೆಂಡೆಂಟ್ ಇದ್ದಾಗ ಅದರ ಸೊಬಗೇ ಬೇರೆ. . . ಇದರ ಕಿವಿಯೋಲೆ ಉದ್ದವಾಗಿರೋದೇ ಚೆನ್ನ. ಅಲ್ಲದೆ ಈಗಿನ ಟ್ರೆಂಡ್ ಕೂಡಾ ಅದೆ ಮಧ್ಯದಲ್ಲಿ ದೊಡ್ಡ ಹರಳು ಇದ್ದಾಗ ಸುಂದರವಾಗಿರುತ್ತದೆ.

ನೆನಪಿರಲಿ ಸ್ನಾನ ಮಾಡುವಾಗ, ಪ್ರಯಾಣ ಮಾಡುವಾಗ (ಮಲಗಿರುವಾಗ) ತೊಡಬಾರದು. ಅತಿ ದುಬಾರಿಯ ಹರಳುಗಳಿಲ್ಲವಾದ್ದರಿಂದ ಜಾಗರೂಕತೆಯಿಂದ ನೋಡಿಕೊಂಡಲ್ಲಿ ದೀರ್ಘ ಕಾಲ ಬರುತ್ತದೆ.

ಚಿನ್ನದಲ್ಲಿ ಮ್ಯಾಟ್ ಫಿನಿಶ್ ಇರುವ ಹಾಗೆ ಹರಳುಗಳಲ್ಲೂ ಪಾಲಿಶ್ ಆಗದ್ದನ್ನು ಆಭರಣದಲ್ಲಿ ಅಳವಡಿಸುತ್ತಾರೆ ಅದೂ ಅತ್ಯಂತ ಮೆರುಗನ್ನು ನೀಡುತ್ತದೆ. ಮೇಕಿಂಗ್ ಚಾರ್ಜ್ ಕಡಿಮೆಯಾಗುತ್ತದೆ.

ಆಭರಣ, ಬಟ್ಟೆ, ವಸತಿ, ವಾಹನ ಯಾವುದೇ ಇರಲಿ ನಮ್ಮ ಮನಸ್ಸಿಗೆ ಮುದ ನೀಡಬೇಕು. ಅದು ನಮ್ಮನ್ನ ಕೆರಳಿಸುವಂತೆ ಇರಬಾರದು. ಮನಸ್ಸನ್ನು ನಮ್ಮ ಹತೋಟಿಯಲ್ಲಿ ಇಟ್ಟು ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ಎಂದು ವಿಂಗಡಿಸಿ ಆದಷ್ಟು ಒಳ್ಳೆಯದಕ್ಕೆ ನಮ್ಮನ್ನ ಪ್ರಚೋದಿಸುವಂತಹ ನಮ್ಮೊಂದಿಗಿರುವ ನಮ್ಮ ವಸ್ತುಗಳನ್ನು ನಾವು ಆಯ್ಕೆ ಮಾಡಬೇಕು. ಇದನ್ನು ನಾವು ಬಹಳ ಜಾಗರೂಕತೆಯಿಂದ ನಿರ್ವಹಿಸಿದಲ್ಲಿ ನಮ್ಮ ಜೀವನ ಸಾರ್ಥಕ. ಆಭರಣವಾಗಲೀ, ಬಟ್ಟೆಯಾಗಲೀ ಇಂದು ಮಹಿಳೆಯರಿಗೆ, ಪುರುಷರಿಗೆ ಬಹಳ ಆಸಕ್ತಿಯ ವಿಷಯ ಅದರಲ್ಲಿರುವ ವಿನ್ಯಾಸ, ಬಣ್ಣ ನಮ್ಮನ್ನು ಶಾಂತತೆ, ಉತ್ಸಾಹ, ಹರ್ಷ, ನೆಮ್ಮದಿಯೆಡೆಗೆ ಕೊಂಡೊಯ್ಯುವಂತೆ ಪ್ರೇರೇಪಿಸಿದಾಗ ನಮ್ಮನ್ನು ನಾವು ಬದಲಾಯಿಸಿಕೊಳ್ಳಬೇಕು.

ಪವಿತ್ರತೆ ಅನ್ನೋದು ನಮ್ಮ ಒಳ ಮನಸ್ಸಿನಲ್ಲಿರಬೇಕು. ತೋರಿಕೆಗಾಗಿ ಇರಬಾರದು. ನಮ್ಮ ಮನಸ್ಸು ನಮ್ಮ ಹಿಡಿತದಲ್ಲಿದ್ದಾಗ ಇದನ್ನ ಕಾಯ್ದುಕೊಳ್ಳಬಹುದು. ಆಭರಣ, ಬಟ್ಟೆ ಅನ್ನೋದು ನಮ್ಮ ಸಂತೋಷಕ್ಕಾಗಿ ಇರಬೇಕು! ತೋರಿಕೆಗಾಗಿ ತೊಟ್ಟುಕೊಂಡಾಗ ಅದು ನಮಗೆ ತೃಪ್ತಿಯನ್ನ ಕೊಡುವುದಿಲ್ಲ. ಕಡಿಮೆ ಮೌಲ್ಯದ್ದಾದರೂ ನಮ್ಮನ್ನ ಉನ್ನತಿಯತ್ತ ಕೊಂಡೊಯ್ಯುವ ವಸ್ತುಗಳನ್ನು ನಾವು ಬಳಸಬೇಕು.